# NAAC TEAM VISITS KSCD

ಈ ದಿನ 03-10-2024ರಂದು NAAC ಕಮೀಟಿಯ ಚೇರ್ಮನ್ ರಾದ ಪ್ರೊ.ಸುಹಾಸ್.ಪೆಡ್ನೆಕರ (ವಿಶ್ರಾಂತ ಕುಲಪತಿಗಳು, ಮುಂಬೈ ವಿಶ್ವವಿದ್ಯಾಲಯ) ಮತ್ತು NAAC ಕಮೀಟಿಯ ಸಂಯೋಜಕರು ಹಾಗೂ ಸದಸ್ಯರಾದ ಡಾ.ಪಿ.ಮಾದವನ ಸೋಮ ಸುಂದರಮ್ (ಪ್ರಾಧ್ಯಾಪಕರು,ಅಪರಾಧ ಶಾಸ್ತ್ರ ವಿಭಾಗ,ಮನೋನ್ಮಣಿಯಂ ಸುಂದರಾನರ್ ವಿಶ್ವವಿದ್ಯಾಲಯ,ತಮಿಳುನಾಡು) ಮತ್ತು ಮತ್ತೊರ್ವ NAAC ಕಮೀಟಿಯ ಸದಸ್ಯರಾದ ಡಾ.ರಾಜೀವ.ಮಾತುರ್ (ನಿರ್ದೇಶಕರು,Mody ವಿಶ್ವ ವಿದ್ಯಾಲಯ,ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ,ರಾಜಸ್ಥಾನ) ನಮ್ಮ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದರು. ಪ್ರಾಚಾರ್ಯರಾದ ಡಾ.(ಶ್ರೀಮತಿ)ಎಮ್.ಎಸ್.ಸಾಳುಂಕೆ ಯವರು NAAC ಕಮೀಟಿಯ ಚೇರ್ಮನ್ನರನ್ನು ಮತ್ತು ಸದಸ್ಯರನ್ನು ಸ್ವಾಗತಿಸಿದರು. ಈ ಕಮೀಟಿಯ ಚೇರ್ಮನ್ನರು ಮತ್ತು ಸದಸ್ಯರು ಎಲ್ಲ ವಿಭಾಗಗಳಿಗೆ ಭೇಟಿ ನೀಡುತ್ತ, ನಮ್ಮ ಪ್ರಾಣಿಶಾಸ್ತ್ರ ವಿಭಾಗಕ್ಕೂ ಭೇಟಿ ನೀಡಿ, ವಿಭಾಗದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯಕ್ಕೆ, ಔದ್ಯೋಗಿಕ ಮೀನುಗಾರಿಕೆ ಹಾಗೂ ಸೂಕ್ಷ್ಮ ಜೀವಶಾಸ್ತ್ರ ವಿಭಾಗಗಳಿಗೆ ಭೇಟಿ ನೀಡಿ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಡೀನ್ ರವರು ಹಾಗೂ ಕಾಲೇಜಿನ ನ್ಯಾಕ್ ಕಮೀಟಿಯ ಅಧ್ಯಕ್ಷರು ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಜರಿದ್ದರು.🙏🌱









39